ಈ) ಹಾಗಿಲ್ಲದಿದ್ದಲ್ಲಿ ನೀರು ಸರಬರಾಜನ್ನು ಯಾವ ರೀತಿ ಮಾಡಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಯವರು)

ಅ) ಯೋಜನೆಯನ್ನು ದಿನಾಂಕ 9 10 2006 ರಂದು ಚಾಲನೆಗೊಳಿಸಲಾಗಿದೆ

ಆ) ಈ ಯೋಜನೆಯ ಎಲ್ಲಾ ಕಾಮಗಾರಿಗಳು ನವೆಂಬರ್ 2006ರ ಅಂತ್ಯದೊಳಗೆ ಮುಗಿಯಬೇಕಾಗಿತ್ತು ಆದರೆ ಜೂನ್ 2007ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ

ಇ) ಹಾಲಿ ಇರುವ ವಿತರಣಾ ಜಾಲವನ್ನು ಉಪಯೋಗಿಸಲಾಗಿದೆ

ಈ) ಸಧ್ಯ ಪಟ್ಟಣದಲ್ಲಿ ಹಾಲಿ ಇರುವ ವಿತರಣಾ ಜಾಲದ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ

414 (35) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಪೌರಾಡಳಿತ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಪಟ್ಟಣದ ಬಿ ಡಿ ಎಸ್ ಎಂ ಟಿ ಯೋಜನೆಯಡಿಯಲ್ಲಿ ರಸ್ತೆ ಮಾರಾಟ ಮಳಿಗೆಗಳು ಕೋಲ್ಡ್ ಸ್ಟೋರೇಜ್ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ ಮತ್ತು ಯಾವಾಗ ಮುಗಿಯುತ್ತದೆ,

ಆ) ಈ ಯೋಜನೆಯಲ್ಲಿ ಪುರಸಭೆಯ ಆವರಣದಲ್ಲಿ ನಿರ್ಮಿಸುತ್ತಿರುವ ಮಾರಾಟ ಮಳಿಗೆಗಳು ಲೀಟರ್ ವರೆಗೆ ಬಂದಿದ್ದರೂ ಸಹ ಅದನ್ನು ಬೇರೆಡೆಗೆ ಸ್ಥಳಾಂತರಿಸಲು ಆದೇಶಿಸಿದ್ದು ನಿಜವಲ್ಲವೆ,

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಮುಂದಿನ ಕ್ರಮವೇನು?

ಶ್ರೀ ಆರ್ ಶ್ರೀನಿವಾಸ್ (ಪೌರಾಡಳಿತ ಸಚಿವರು)

ಅ) ಭಾಲ್ಕಿ ಪಟ್ಟಣದ ಐ ಡಿ ಎಸ್ ಎಂ ಟಿ ಯೋಜನೆಯಡಿ ತೆಗೆದುಕೊಳ್ಳಲಾದ ರಸ್ತೆ, ಮಾರಾಟ ಮಳಿಗೆಗಳು ಕೋಲ್ಡ್ ಸ್ಟೋರೇಜ್, ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ

1 1 50 ಕಿ ಮೀಗಳ ರಸ್ತೆ ಕಾಮಗಾರಿ ಪೂರ್ಣಗೊಂಡಿದೆ

2 46 ಮಳಿಗೆಗಳ ವಾಣಿಜ್ಯ ಸಂಕೀರ್ಣದ ತಳಪಾಯ ಹಂತದ ಕಾಮಗಾರಿ ಪೂರ್ಣಗೊಂಡಿರುತ್ತದೆ

3 14 ತರಕಾರಿ ಮಾರಾಟ ಮಳಿಗೆಗಳ ಕಾಮಗಾರಿ ಪೂರ್ಣಗೊಂಡಿದೆ

4 ಕೋಲ್ಡ್ ಸ್ಟೋರೇಜ್ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವುದಿಲ್ಲ

ಆ) ಹೌದು

ಇ) ಇದನ್ನು ಪುರಸಭೆ ಹಾಗೂ ಜಿಲ್ಲಾ ಮಟ್ಟದ ಐ ಡಿ ಎನ್ ಎಂ ಟಿ ಸಮಿತಿಯ ಶಿಫಾರಸ್ಸಿನ ಮೇರೆಗೆ ರಾಜ್ಯ ಮಟ್ಟದ ಮಂಜೂರಾತಿ ಸಮಿತಿ ಸಭೆಯಲ್ಲಿ ಮಂಡಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು

415 (36) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಕ್ಷೇತ್ರದಲ್ಲಿ 2003 ರಿಂದ ಇಲ್ಲಿಯವರೆಗೆ 11 ಕೆ ವಿ, 33 ಕೆ ವಿ ಹಾಗೂ 110 ಕೆ ವಿ ವಿದ್ಯುತ್ ಶಕ್ತಿಯ ಸ್ಟೇಷನ್‌ಗಳೆಷ್ಟು ಹಾಗೂ ಈ ಸ್ಟೇಷನ್ ಗಳಿಗೆ ಯಾವಾಗ ಮಂಜೂರಾತಿ ಮಾಡಲಾಗಿದೆ,

ಆ) ಹಾಗಿದ್ದಲ್ಲಿ ಮೇಲಿನ ಸ್ಟೇಷನ್‌ಗಳ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ,

ಇ) ಈ ಸ್ಟೇಷನ್ ಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು,

ಈ) ಈ ಸ್ಟೇಷನ್‌ಗಳ ಕಾಮಗಾರಿಗಳನ್ನು ಯಾವಾಗ ಮುಗಿಸಲಾಗುವುದು?

ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) 11 ಕೆ ವಿ ವಿದ್ಯುತ್ ಸ್ಟೇಷನ್‌ಗಳು ಇರುವುದಿಲ್ಲ ಆದುದರಿಂದ ಇವುಗಳನ್ನು ಮಂಜೂರು ಮಾಡುವ ಪ್ರಮೇಯ ಉದ್ಭವಿಸುವುದಿಲ್ಲ ಭಾಲ್ಕಿ ಕ್ಷೇತ್ರದಲ್ಲಿ 2003 ರಿಂದ ಇಲ್ಲಿಯವರೆಗೆ ಕವಿಪ್ರನಿನಿಯ ವತಿಯಿಂದ ಒಂದು 110 ಕೆ ವಿ ವಿದ್ಯುತ್ ವಿತರಣಾ ಕೇಂದ್ರಕ್ಕೆ ದಿನಾಂಕ 27/5/2006 ರಂದು ಮಂಜೂರಾತಿ ನೀಡಲಾಗಿದೆ ಈ ವಿದ್ಯುತ್ ಉಪಕೇಂದ್ರವನ್ನು ಲಾಧಾ ದಲ್ಲಿ ನಿರ್ಮಾಣ ಮಾಡಲಾಗುವುದು

ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯು 2003 ರಿಂದ ಇಲ್ಲಿಯವರೆಗೆ ಭಾಲ್ಕಿ ಕ್ಷೇತ್ರದಲ್ಲಿ ಯಾವುದೇ 33 ಕೆ ವಿ ವಿದ್ಯುತ್ ಸ್ಟೇಷನ್ನಿಗೆ ಮಂಜೂರಾತಿಯನ್ನು ನೀಡಿರುವುದಿಲ್ಲ